# ಕಥೋಪದೇಶ


## ಭಿಕ್ಷುಕನ ದಾನ

**ಭಿ**ಕ್ಷುಕನೊಬ್ಬನು ಖಿನ್ನಮನಸ್ಕನಾಗಿ ರಸ್ತೆಯ ಬದಿ ನಿಂತಿದ್ದನು. ಇದ್ದಕ್ಕಿದ್ದಂತೆಯೇ ಆಕಾಶದಿಂದ ಒಂದು ಚಿನ್ನದ ರಥ ಕೆಳಗಿಳಿಯಿತು. ಅದರಲ್ಲಿ ಒಬ್ಬ ದೇವತೆ. ಭಿಕ್ಷುಕನಿಗೆ ಆ ದೇವತೆಯನ್ನು ನೋಡಿ ಸಂತೋಷವಾಯಿತು. ಇನ್ನು ತನ್ನ ಭಿಕ್ಷಾವೃತ್ತಿ ಕೊನೆಗೊಳ್ಳುತ್ತದೆ ಎಂದು ಆತ ಹಿಗ್ಗಿದ.

ಆದರೆ ಅವನ ದುರುದೃಷ್ಟಕ್ಕೆ ಆ ದೇವತೆ ಅವನ ಹತ್ತಿರ ಬಂದು ಅವನಿಂದಲೇ ಭಿಕ್ಷೆ ಬೇಡಿದನು! ಭಿಕ್ಷುಕನಿಗೆ ಸಹಿಸಲಾಗದ ದುಃಖವಾಯಿತು. ಅವನ ನಿರೀಕ್ಷೆಯೆಲ್ಲ ನುಚ್ಚು ನೂರಾಯಿತು. ತುಂಬ ನೋವಿನಿಂದ ತಿರಸ್ಕಾರ ದಿಂದ ತನ್ನ ಜೋಳಿಗೆಯಿಂದ ಒಂದು ಧಾನ್ಯದ ಕಾಳು ತೆಗೆದು ದೇವತೆಗೆ ನೀಡಿದನು.

ದೇವತೆ ಹೊರಟು ಹೋದ. ಭಿಕ್ಷುಕ ತನ್ನ ತಂಗುದಾಣಕ್ಕೆ ಹೋಗಿ ಜೋಳಿಗೆಯನ್ನು ಬಿಚ್ಚಿದ. ಅದರಲ್ಲಿ ಒಂದು ಚಿನ್ನದ ಕಾಳು ಸಿಕ್ಕಿತು! ಅದನ್ನು ನೋಡಿದಾಗ ಆ ಭಿಕ್ಷುಕನಿಗೆ ತನ್ನ ತಪ್ಪಿನ ಅರಿವಾಯಿತು. ಅವನು ತನಗೆ ತಾನೇ ಹೇಳಿಕೊಂಡ: "ನಾನು ಎಂಥ ಮೂರ್ಖ. ನಾನು ಒಂದೇ ಒಂದು ಕಾಳು ಧಾನ್ಯ ಆ ದೇವತೆಗೆ ಕೊಟ್ಟೆ. ಅದಕ್ಕೆ ಒಂದು ಕಾಳು ಚಿನ್ನ ಸಿಕ್ಕಿತು. ನಾನು ಒಂದು ಹಿಡಿ ಧಾನ್ಯವನ್ನಾದರೂ ಕೊಟ್ಟಿದ್ದರೆ ಒಂದು ಹಿಡಿಯಷ್ಟು ಚಿನ್ನದ ಕಾಳು ನನಗೆ ಸಿಗುತ್ತಿತ್ತು. ನಾನು ದೊಡ್ಡ ಶ್ರೀಮಂತನಾಗಬಹುದಿತ್ತು. ನಾನು ಎಂತಹ ತಪ್ಪು ಮಾಡಿದೆ!"

ಧಾರಾಳವಾಗಿ ನೀಡಿದರೆ
ಧಾರಾಳವಾಗಿ ದೊರೆಯುತ್ತದೆ.



ಕಲೆ : ಶ್ರೀಕಾಂತ